


ಶಿಕಾರಿಪುರ ತಾಲ್ಲೂಕಿನ ಕೃಷಿ ಭೂಮಿಗೆ ನೀರು ಒದಗಿಸುವ ಅಂಜನಾಪುರ ಜಲಾಶಯ

## ಮನದ ಭಾಷೆಯ ‘ಚೆನ್ನುಡಿ’

‘ನಾವಾಡುವ ನುಡಿಯೇ ಕನ್ನಡ ನುಡಿ’ ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ ‘ಚೆನ್ನುಡಿ’ ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.

ಆಕಿ ಗದ್ದಿಕಡ್ಗೆ ಹೋಗಿ ಬದ್ನಾಗೆ ಬೆಳ್ದಿರೊ ಸೊಪ್ಪ ಕಿತ್ಕಂಡ್ಬಂದು ಕೊಡೇಕಿ. ಅಚ್ಚೇರು ಅಕ್ಕಿನಾರ ಕೊಡ್ರಿ, ತಂಬ್ಳಿ ಮಾಡ್ಕಂಡು ಉಣ್ತೇನಿ ಅಂದ್ಕಂತ ಕಟ್ಟಿಮ್ಯಾಲೆ ಕುಂತ್ಕಂಡು ಊರಾಳಿನ್ಸುದ್ದೀನ್ನೆಲ್ಲಾ ಪಂಟು ಹೊಡ್ದು, ಮನ್ಯಾಗೆ ಮಾಡಿದ್ದೆನಾರ ತಿಂದು, ಕಾಪಿ ಕುಡ್ದು, ನುಚ್ಚೊ ಅಕ್ಕಿನೊ ಇಸ್ಕಂಡು ಹೋಗೇಕಿ. ಏ... ಗಂಗವ್ವ, ಹಟ್ಟಿಹಬ್ಬ ಬಂತು ಹಿತ್ಲುದು ಗ್ವಾಡೀಗೆ ಕೊಟ್ಟಿಮಣ್ಣಾರ ಹಚ್ಕೊಡೆ ಅಂದ್ರೆ, ಆಕೀಗೆ ಮೈ ಬಗ್ಗದಿಲ್ಲ ಬರೀ ಮಾತುಮಾತು. ನಾಳೆ ಹೊತ್ತಾರೆನೆ ಬಂದ್ಬಿಡ್ತೀನಿ. ಈಗ ಹೊತ್ತು ನೆತ್ತಿಗ್ಬಂತು. ಅನ್ತ ನಗೇಕಿ. ಬೈಯಂಗೂಯಿಲ್ಲ. ಬೈದ್ರು ನಗೇಕಿ. ನಮ್ಮ ಎಂಕ್ಟಜ್ಜಿ ಇರ್ಬೇಕಿತ್ತು. ಉಗ್ದು, ಉಪ್ಪಿನ್ಕಾಯಿ ಹಾಕೇಕಿ. ಅಂದ್ರೆ ಆ ಮಾತ್ಬಿಟ್ಟು ಬ್ಯಾರೆ ಮಾತ್ತೆತ್ತೇಕಿ. ಬುಗ್ಗನ್ನೇರು ಮನ್ಯಾಗೆ ಹಬ್ಬ ಹೋಗೊ ಹೋರಿ ತಂದಾರಂತೆ. ನೋಡಿದ್ರೇನು? ಭಾರಿ ಹೋರ್‍ರಿಗ್ಳು. ಯಾ ಊರಾಗೂ ಸೋತಿಲ್ಲಂತವ್ವ. ಊರ್ಮಂದಿ ಅವ್ರು ಹಕ್ಕಿಮನ್ಯಾಗದಾರೆ. ಹಿಂಗೆ ತಾಟಿಪೂಟಿ ಮಾಡಿ ಆರಾಮಾಗಿರೇಕಿ.

ಅಕ್ಕಯ್ಯಾ ಪ್ಯಾಟೀಗೊಂಟೀರಾ... ಅಂತ ಈ ಹುಡ್ರು ಕಾಟವ, ಒಂದಿಷ್ಟು ಒಳ್ಳಿ ಸೀರಿ ಉಟ್ಕಂಡು ಹೊಂಟ್ರೆ ಸಾಕು. ಶಿಕಾರಿಪುರ್‌ದ ರಾಜಶೇಖರ ಟ್ಯಾಕೀಸ್‌ಗೆ ಗಂಧದ ಗುಡಿ ಸಿನ್ಮ ಬಂದೇತಂತವ್ವ. ಊರಾಗೆಲ್ಲಾ ಜನ ಹೋಗಿ ನೋಡ್ಕಂಡು ಬಂದ್ವಾರೆ. ವಾರದಿಂದ್ಲೆ ಸವುರ್ಸಕ್ಕಂಡು ಆಳ್ಮಕ್ಕಳಿಗೆಲ್ಲಾ ಹೇಳಿ, ಬೇಸ್ತ್ ವಾರ ಹೊಂಟ್ವಿ. ಅವತ್ತು ರೊಟ್ಟಿ ಪಟ್ಟಿ ಏನೂಯಿಲ್ಲ. ಅನ್ನಸಾರು ಅಷ್ಟೆ. ಸಣ್ಣಣ್ಣಯ್ಯ, ದೊಡ್ಡಣ್ಣಯ್ಯ, ಅಪ್ಪ, ಅವ್ವ ಎಲ್ರೂ ಹೊಂಡೊ ತಯಾರಿ ಜೋರಿತ್ತು. ಹಿಂದಿನ್ದ ದಿನಾನೆ ತಲಿ ಸ್ನಾನ ಮಾಡಿ, ನಾಳೆ ಹಾಕ್ಕೊಂಡು ಹೋಗೊಬಟ್ಟೆ ಜೋಡಿಸ್ಕೊಂಡು ನಾಳೆ ಬೆಳ್ಕರಿಯಾದನ್ನೆ ಕಾಯ್ಕೊಂಡು ಮಕ್ಕಳೋದು. ಯಾವಾಗ ನಿದ್ದಿ ಹತ್ತುತೊ ಏನೊ. ಮಧ್ಯಾಹ್ನಾತು ಏದ್ದೇಳ್ರೀ ಅಂತ ಅಚ್ಚಮ್ಮ ಕೂಗಾಕತ್ತೇತಿ. ಕಣ್ಬಿಟ್ಟು ನೋಡಿದ್ರೆ ಬೆಳ್ಕೂಹರ್ದಿಲ್ಲ. ಈ ವಜ್ಜಿದೊಂದು ಕಾಟ್ನೋಡವ್ವ ಮಕ್ಕಳಾಕೂ ಬಿಡಾದಿಲ್ಲಾಂತ ಅನ್ಕಾಂತಾನೆ ಎದ್ದು ಗಡಗಡ ಹೊಂಡಾದು. ಪಾಂಡ್ಸು ಇಸ್ನೊ ಹಚ್ಕೊಂಡು, ಪೌಡ್ರು ಬಡ್ಕಂಡು, ಸಿಂಗಾರ್ ಕುಂಕ್ಮ ದುಂಡುಗೆ ಸರಿಮಾಡ್ಕಂಡು ಹಿಂಗೆ ಎಲ್ರೂ ಅವ್ರವರ್ದೆ ಸಿಂಗಾರ ಮಾಡ್ಕಂಡು ಹೊಂಟ್ವಿ. ಅಷ್ಟಾಗೆ, ಆಳ್ಮಗ ಲಕ್ಷ್ಮಣಪ್ಪ ಗಾಡಿಕಟ್ಟಿ, ಕುಂತ್ಕಳೊ ಜಾಗಕ್ಕೆ ಹುಲ್ಲಾಕಿ ಮ್ಯಾಲೊಂದು ದುಪ್ಪಿ ಹಾಸಿದ್ದ.

ಕರ್ನಾಟಕದ ವಿವಿಧ ಜಿಲ್ಲೆಗಳ ನುಡಿಸೊಬಗನ್ನು ಪರಿಚಯಿಸುತ್ತಿರುವ ‘ಚೆನ್ನುಡಿ’ ಅಂಕಣಕ್ಕೆ ನೀವೂ ಬರೆಯಬಹುದು. ನಿಮ್ಮೂರಿನ ಭಾಷೆಯ ಸೊಗಡನ್ನು ಓದುಗರೊಂದಿಗೆ ಹಂಚಿಕೊಳ್ಳಬಹುದು. ಲೇಖನ 1000 ಪದಮಿತಿಯಲ್ಲಿ, ನುಡಿ ಅಥವಾ ಯುನಿಕೋಡ್‌ನಲ್ಲಿರಲಿ. ಇಮೇಲ್–
**editorsu@sudha.co.in**

ದೊಡ್ಡೋರೆಲ್ಲಾ ನಡುಬರಿಕೆ ಕುಂತ್ರೆ, ಹುಡ್ರು ಹಿಂದೆ ಕಾಲು ಇಳೆಬಿಟ್ಕಂಡು ಕುಂತ್ರು. ದಾರ್ಯಾಗೆ ಸಿಕ್ಕೋರೆಲ್ಲಾ ಪ್ಯಾಟೀಗೊಂಟ್ರ, ಪ್ಯಾಟೀಗೊಂಟ್ರಾಂತ ಕೇಳೋರು. ಹ್ಞೂ ಹ್ಞೂ... ಸಿನಿಮಾಕ್ಕೆ ಅಂದ್ದಂದು ಸಾಕಾತು. ಅಡ್ಡರಸ್ತಿ ಸಿಕ್ಕಿದ್ದೆ ಗೊತ್ತಾಗ್ಲಿಲ್ಲ. ಅಷ್ಟು ಗಡ ಬಂತು.

ಮಾಂತಪ್ಪಮಾವ ಅಲ್ಲೆ ಬೀಡಿ ಸೇದ್ಕಂತ, ಯಾರತ್ರಾನೊ ಮಾತಾಡ್ತಾನಿಂತಿತ್ತು. ಮತ್ತೆ ಅದೆ ಪ್ರಶ್ನಿ. ಏ... ಹಂಗಾರೆ ಮ್ಯಾಟ್ನಿ ನೋಡಿ ಆಮ್ಯಾಕೆ ಸಂಗೊಳ್ಳಿ ರಾಯಣ್ಣ ನಾಟ್ಕ ಬಂದೇತಿ ನೋಡ್ಕಂಡು ಬರ್‍ರಿ. ಆರಕ್ಕೆ ಶುರುವಾಕೇತಿ ಅಂತೇಳಿ ಊರ್ಕಡೆ ಹೊಂಡ್ತು. ಅಡ್ಡರಸ್ತಿಯಿಂದ ಮುಂದಕ್ಕೆ ಡಾಂಬರುರಸ್ತಿ. ಗಾಡಿಯೊಳ್ಗೆ ಮಾತಾಡ್ಕಂತ ಆ ಕಡಿ ಈ ಕಡಿ ಭತ್ತದ್‌ಗದ್ದಿಗುಳ್ನ ನೋಡ್ಕಂತ ಕುಟ್ರಳ್ಳಿ ಪಾರಂ, ಗೌರಿಹಳ್ಳ, ಕುಮದ್ವ್ಯೊತಿ ಹೊಳಿ ಬಂದೆಬಿಡ್ತು. ಇನ್ನೇನು ಶಿಕಾರಿಪುರ ಬಂದಂಗೆ. ದೊಡ್ಡಾಸ್ಪತ್ರಿ ಕಡಿಯಿಂದ್ಲೆ ಹೋಗಿ ದೊಡ್ಕೇರ್ಯಾಗಾಸಿ ಹೋಗಿ ರಾಮಭವ್ನದ ಮುಂದೆ ನಮ್ಮನ್ನೆಲ್ಲ ಇಳಿಸಿ, ಲಕ್ಷ್ಮಣಪ್ಪ ಬಯಲಾಗೆ ಗಾಡಿ ನಿಲ್ಸಿ ಬರ್ತಿನಂತ ಹೋದ. ಹೊಟ್ಲೀನ ಒಳಗೋಗಿ ಟೇಬಲ್ಲು ಕುರ್ಚಿಗೆ ಹೋಗಲಿಲ್ಲ. ಒಳಾ.. ಗೆ ನಡ್ಮನಿ ಹಂಗೆ. ಸಾಲುಗೆ ಮಣೆಗಳ್ನಾಕಿರ್ತಾರೆ ಅಲ್ಲಿಗೋಗಿ ಕುಂತ್ವಿ. ಮಾಮೂಲಿ ಮಸಾಲ್ದೊಸಿ ಕಾಪಿಕುಡುದ್ವಿ. ವಂದಾಕ್ಕೆ ಹೋಗೋರು ಹೋಗ್ರಿ ಅಂತ ಅವ್ವಹೇಳ್ತು. ಅದನ್ನೆಲ್ಲಾ ಮುಗಿಸ್ಕೊಂಡು ರಾಮಭವನದ ಮುಂದೆನೆ ಬಳೆ ಅಂಗ್ಡೀಗುಳು. ಮೊದ್ಲೆನೆ ಅಂಗ್ಡಿಯೊರೆ ನಮ್ಗೆ ಪರಿಚಯ.

ನಮ್ಮಣ್ಣ ಶಿಕಾರಿಪುರದಾಗೆ ಹೈಸ್ಕೂಲ್ ಓದೋವಾಗ ಅಂಗ್ಡಿಯೊಳಾಗೆ ಕುಂತ್ಕಂತಳಲ್ಲ ಅವಮ್ಮಾನೂ ಒತ್ತಿತಂತೆ. ಆವಾಗೆಲ್ಲಾ ಹೈಸ್ಕೂಲೀಗೆ ಸೀರೆ ಉಟ್ಕೊಂಡು ಬರೋರಂತಪ್ಪ. ಬಳೆ ಅಂಗ್ಡಿ ತುಂಬಾ ನಾವೆಲ್ಲರೂ ಕುಂತ್ಕಂಡು, ಬಳೆಗುಳ್ನ ಆರಿಸ್ಕೊಂಡು ನೈಲಾನ್ ಬಳಿ, ರೇಷ್ಮಿಬಳಿ, ಚುಕ್ಕಿ ಬಳಿ ಎಲ್ಲಾ ಹುಡ್ಕಾಡಿ ಗಡಿಬಿಡಿ ಆಗೊದ್ರೊಳಗೆ ಗಂಟೆ ಒಂದಾಗೋದು. ಅಲ್ಲಿಂದ ಹಂಗೆ ರಾಜಶೇಖರ ಟ್ಯಾಕೀಸ್‌ಗೆ ಹಿತ್ಲುಬಾಗ್ಲು, ಮಣ್ಣ್ಯಾರ್ ಕೇರ್ಯಾಗಾಸಿ ಹೊಂಟ್ವಿ. ಏ... ಬಳಿ